# ಕುವೆಂಪು ವಿಶ್ವವಿದ್ಯಾಲಯ

# *ವಿಶೇಷ ಸಿಂಡಿಕೇಟ್ ಸಭೆಯ*
# ನಡಾವಳಿಗಳು

## ಸಭಾ ದಿನಾಂಕ : 08-06-2022

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451
ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್: drsyndicateku@gmail.com
☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುವಿಟಿ-1:ಸಿಂ-6:22: 129 :2022-23 ದಿನಾಂಕ:23-06-2022

ಮಾನ್ಯರೆ,

ವಿಷಯ: ದಿನಾಂಕ:02-06-2022, 08-06-2022 ಹಾಗೂ 15-06-2022 ರಂದು ನಡೆದ ಸಿಂಡಿಕೇಟ್‌ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:02-06-2022 ಹಾಗೂ ದಿನಾಂಕ:08-06-2022 ರಂದು ನಡೆದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ:15-06-2022 ರಂದು ನಡೆದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೊಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ: ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು: ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಚೇರಿ ಪ್ರತಿ / ರಕ್ಷಾ ಕಡತ.

PROCEEDINGS COVE LETTER-23-06-20222

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:08-06-2022 ರಂದು ಬುಧವಾರ ಅಪರಾಹ್ನ :03.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್ ) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಅಶೋಕ್ ಡಿ. ರೇವಣ್‌ಕರ್, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ರಿಯಾಜ್ ಮಹಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 14. | ಶ್ರೀ. ಬಿ.ಸಿ. ಬಸವರಾಜಪ್ಪ., ಪ್ರಾಂಶುಪಾಲರು. | ಸದಸ್ಯರು |
| 15. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 17. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಆನ್‌ಲೈನ್ ಮೂಲಕ ಭಾಗವಹಿಸಿದ ಸದಸ್ಯರಾದ ಡಾ. ಅಶೋಕ್ ಡಿ. ರೇವಣ್‌ಕರ್, ಪ್ರಾದೇಶಿಕ ಜಂಟಿ ನಿರ್ದೇಶಕರು, ಶ್ರೀ ಬಿ. ನಿರಂಜನ ಮೂರ್ತಿ, ಶ್ರೀ ಎನ್. ಆರ್. ಮಂಜುನಾಥ ಹಾಗೂ ಶ್ರೀ ಧರ್ಮಪ್ರಸಾದ್ ಜಿ. ರವರಿಗೂ ಕೂಡ ಸ್ವಾಗತ ಕೋರಿದರು, ಹಾಗೂ ಪ್ರಾಂಶುಪಾಲರ ಜೇಷ್ಠತೆಯ ಆಧಾರದ ಮೇಲೆ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ ನೂತನ ಸದಸ್ಯರಾದ ಶ್ರೀ. ಬಿ.ಸಿ. ಬಸವರಾಜಪ್ಪ, ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು. ವಿಶೇಷ ಸಭೆಯನ್ನು ಅತಿ ತುರ್ತಾಗಿ ಕರೆಯಲಾಗಿದೆ ಎಂದು ಹೇಳಿ ಸಭೆಯನ್ನು ಅಧ್ಯಕ್ಷರು ಮುಂದುವರೆಸಬೇಕೆಂದು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಿಂಡಿಕೇಟ್‌ಗೆ ನೂತನವಾಗಿ ಆಯ್ಕೆಯಾದ ಶ್ರೀ ಬಸವರಾಜಪ್ಪ ಇವರಿಗೆ ಮತ್ತೊಮ್ಮೆ ಸ್ವಾಗತ ಕೋರಿದರು. ಈ ಸಭೆಯನ್ನು ಅತ್ಯಂತ ತುರ್ತಾಗಿ ಕರೆಯಲು ಕಾರಣವಿದೆ.

ದಿನಾಂಕ: 16-06-2022ರಂದು ನಡೆಯುವ 31 ಮತ್ತು 32ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಯಶಸ್ವಿಗೊಳಿಸಿ ಕೊಡಬೇಕೆಂದು ಸದಸ್ಯರನ್ನು ಕೋರಿದರು. ದಿನಾಂಕ: 14-06-2022 ರಂದು ಸುದ್ದಿಗೋಷ್ಠಿ ಹಾಗೂ ದಿನಾಂಕ: 15-06-2022ರಂದು ನಡೆಯುವ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಎಲ್ಲಾರು ಹಾಜರಿರಬೇಕು. ಗೌರವಾನ್ವಿತ ರಾಜ್ಯಪಾಲರು ವಿಶ್ವವಿದ್ಯಾಲಯಕ್ಕೆ ಆಗಮಿಸಿರುತ್ತಾರೆ. ಅವರಿಗೆ ಗೌರವ ಕೊಡುವುದು ನಮ್ಮೆಲ್ಲರ ಕರ್ತವ್ಯ ಎಂದರು. ಸರ್ಕಾರವು ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಮೂಲಕ "ಆತ್ಮ ನಿರ್ಭರ ಭಾರತ" ಸಾಕಾರಗೊಳಿಸುತ್ತಿದೆ. ನಾಳೆ ಕಾಮನ್ ವೆಲ್ತ್ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆ ನಡೆಯಲ್ಲಿದ್ದು ಸದರಿ ಸಭೆಯಲ್ಲಿ ನಾನು ಕೂಡ ನೂತನ ಶಿಕ್ಷಣ ನೀತಿ ಕುರಿತು ಮಾತನಾಡಬೇಕಿದೆ ಎಂದು ಹೇಳುತ್ತಾ ಒಟ್ಟಿನಲ್ಲಿ 31 ಮತ್ತು 32ನೇ ವಾರ್ಷಿಕ ಘಟಿಕೋತ್ಸವವು ಯಶಸ್ವಿಯಾಗಲೆಂದು ಆಶಿಸುತ್ತೇನೆ ಎಂದು ಹೇಳಿದರು.

ಮುಂದುವರೆದು, ದಿನಾಂಕ: 02-06-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ರಚಿಸಿ ಶೀಘ್ರವಾಗಿ ಪ್ರಾಂಶುಪಾಲರ ನೇಮಕಾತಿಯನ್ನು ಮಾಡಲು ಹಾಗೂ ಅಲ್ಲಿಯವರೆಗೆ ಈಗಾಗಲೇ ತೆಗೆದುಕೊಂಡ ಕ್ರಮದಂತೆ ಸಹ್ಯಾದ್ರಿ ಕಲಾ ಕಾಲೇಜಿನ ಪ್ರಾಂಶುಪಾಲರಿಗೆ ವಹಿಸಿದ ಪ್ರಭಾರವನ್ನು ಹಾಗೇ ಮುಂದು ವರೆಸಲು ನಿರ್ಣಯಿಸಲಾಗಿತ್ತು. ಆದರೆ ಕೊನೆಯಲ್ಲಿ ಜೇಷ್ಠತೆ ಆಧಾರದ ಮೇಲೆ ನೇಮಕ ಮಾಡಲಾದ ಕ್ರಮವನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗುವುದು ಎಂದು ಹೇಳಿದರು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2022-ಸಿಂ-5.01:** ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ – ಪ್ರಾಂಶುಪಾಲರ ಪ್ರಭಾರ ವಹಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ಚರ್ಚೆ** : ಸದಸ್ಯರಾದ ಶ್ರೀ ಧರ್ಮಪ್ರಸಾದರವರು ಮಾತನಾಡುತ್ತಾ ಇಷ್ಟು ತುರ್ತಾಗಿ ಸಭೆ ಏಕೆ ಕರೆದಿದ್ದಿರಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಜ್ವಲಂತ ಸಮಸ್ಯೆ ಏನಾದರೂ ಇದ್ದಲ್ಲಿ ದಯಮಾಡಿ ಹಿನ್ನೆಲೆ ತಿಳಿಸಿ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಮಾನ್ಯ ಸಿಂಡಿಕೇಟ್ ಸದಸ್ಯರ ಕೋರಿಕೆಯ ಮೇರೆಗೆ ಬ್ಯುಸಿನೆಸ್ ರೂಲ್ಸ್ ಪ್ರಕಾರವೇ ಮಾನ್ಯ ಕುಲಪತಿಗಳ ಅಪ್ಪಣೆ ಮೇರೆಗೆ ಸಭೆ ಕರೆಯಲಾಗಿದೆ. ದಿನಾಂಕ: 02-06-2022ರಂದು ನಡೆದ ಸಿಂಡಿಕೇಟ್ ಸಭೆಯು ಸಂಜೆ 8-00 ಗಂಟೆಯ ತನಕ ನಡೆದಿದ್ದು ಕೊನೆಯ ವೇಳೆಯಲ್ಲಿ ಕೆಲವು ಸದಸ್ಯರು ಸಭೆಯಿಂದ ನಿರ್ಗಮಿಸಿದ್ದ ಹಿನ್ನಲೆಯಲ್ಲಿ ಆ ಸಮಯದಲ್ಲಿ ತುರ್ತು ಇರುವ ಕಾರಣ ತೆಗೆದುಕೊಂಡ ನಿರ್ಣಯವನ್ನು ಮುಂದೆ ಯಾವುದೇ ಗೊಂದಲಕ್ಕೆ ಆಸ್ಪದವಿರಬಾರದು ಎಂಬ ಕಾರಣಕ್ಕೆ ಸ್ಥಿರೀಕರಣಕ್ಕಾಗಿ ಈ ಸಭೆಯಲ್ಲಿ ಮಂಡಿಸಲಾಗಿದೆ ಎಂದರು. ಅಲ್ಲದೆ ಗೌರವಾನ್ವಿತ ರಾಜ್ಯಪಾಲರು ಘಟಿಕೋತ್ಸವದಲ್ಲಿ ಭಾಗವಹಿಸುತ್ತಿರುವುದರಿಂದ ಶಿಷ್ಟಾಚಾರ ಪಾಲನೆ ಬಗ್ಗೆ ಹಾಗೂ ಇತರೆ ವಿಷಯಗಳಾದ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಭಿಯೋಜನಾ ಮಂಜೂರಾತಿ, ದೂರ ಶಿಕ್ಷಣ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆ ಹಾಗೂ ಅಕ್ರಮ ಮರ ಕಡಿತಲೆ ಪ್ರಕರಣಗಳ ಬಗ್ಗೆ ತುರ್ತಾಗಿ ವರದಿ ಸಲ್ಲಿಸಬೇಕಾಗಿದ್ದುದರಿಂದ ಈ ಸಭೆ ಕರೆಯಲಾಗಿದೆ ಎಂದು ಹೇಳಿದರು.

ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿದರು.

**ನಿರ್ಣಯ** : ಚರ್ಚೆಯ ನಂತರ ಪ್ರಸ್ತುತ ಕಾಲೇಜುಗಳಲ್ಲಿ ಪರೀಕ್ಷಾ ಕಾರ್ಯಗಳು ನಡೆಯುತ್ತಿರುವುದರಿಂದ ಪ್ರಾಂಶುಪಾಲರಿಗೆ ಹೆಚ್ಚಿನ ಕಾರ್ಯಭಾರದ ಒತ್ತಡವಿರುತ್ತದೆ, ಒಬ್ಬರಿಗೇ ಎರಡು ಕಾಲೇಜುಗಳ ಪ್ರಭಾರ ನಿರ್ವಹಿಸುವುದು ಕಷ್ಟವಾಗುತ್ತದೆ, ಈ ಹಿನ್ನೆಲೆಯಲ್ಲಿ ಘಟಕ ಕಾಲೇಜುಗಳ ಅಧ್ಯಾಪಕರುಗಳ ಅಂತಿಮ

ಜೇಷ್ಠತಾ ಪಟ್ಟಿಯನುಸಾರ(ದಿನಾಂಕ:31-01-1998ರಲ್ಲಿದಂತೆ) ಡಾ. ರಾಜೇಶ್ವರಿ. ಎನ್ ಪ್ರಾಧ್ಯಾಪಕರು ಸಸ್ಯ ಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ. - ಇವರು ಜೇಷ್ಠತೆಯಲ್ಲಿ ಹಿರಿಯರಾಗಿದ್ದು ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯುವರೆಗೆ ಅಥವಾ ಮುಂದಿನ ಆದೇಶದವರೆಗೆ ಡಾ. ರಾಜೇಶ್ವರಿ. ಎನ್ ಪ್ರಾಧ್ಯಾಪಕರು ಇವರಿಗೆ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರ ಪ್ರಭಾರವನ್ನು ದಿನಾಂಕ: 03-06-2022 ರಿಂದ ವಹಿಸಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2022-ಸಿಂ-5.02:** ದಿನಾಂಕ:25-10-2021 ಮತ್ತು 15-11-2021 ರ ಸರ್ಕಾರದ ಪತ್ರದಂತೆ ದಿನಾಂಕ:21-01-2021ರ ಸಿಂಡಿಕೇಟ್ ನಿರ್ಣಯವನ್ನು ಹಿಂಪಡೆದು ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ.

**ಚರ್ಚೆ** : ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸಂಬಂಧಪಟ್ಟವರಿಂದ ಮಾಹಿತಿಯನ್ನು ಪಡೆದು ಸ್ವಾಭಾವಿಕ ನ್ಯಾಯದ ದೃಷ್ಟಿಯಿಂದ ಒಂದು ಅವಕಾಶ ನೀಡುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯವಾಗಿತ್ತು. ಈ ಹಿನ್ನಲೆಯಲ್ಲಿ ಮಾಹಿತಿ ಕೇಳಿದಾಗ ಪ್ರಕರಣ ನಡೆದ ಸಂದರ್ಭದಲ್ಲಿ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಿದ ಪ್ರೊ. ಹೆಚ್.ಎಸ್. ಭೋಜ್ಯನಾಯ್ಕ್, ಪ್ರಾಧ್ಯಾಪಕರು, ಔದ್ಯೋಗಿಕ ರಸಾಯನ ಶಾಸ್ತ್ರ ವಿಭಾಗ. - ಇವರು ನೀಡಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು. ಸದರಿಯವರು ನೀಡಿರುವ ಮಾಹಿತಿಯಲ್ಲಿ ಅರಣ್ಯ ಇಲಾಖೆಯವರು ವಿಶ್ವವಿದ್ಯಾಲಯಕ್ಕೆ ನೀಡಿರುವ 230 ಎಕರೆ ಭೂ ಪ್ರದೇಶದ ಗುತ್ತಿಗೆ ಅವಧಿಯು 20-02-1999ರಲ್ಲಿ ಅಂತ್ಯಗೊಂಡಿದ್ದು ನಂತರ ನವೀಕರಣಕ್ಕಾಗಿ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ ಸಲ್ಲಿಸಲಾಗಿರುವುದನ್ನು ಸಭೆಯು ಗಮನಿಸಿತು.

1999ರಲ್ಲಿ ಗುತ್ತಿಗೆ ಅವಧಿ ಮುಗಿದ ನಂತರದ ಅವಧಿಯಲ್ಲಿ ಸರ್ಕಾರದಿಂದ ನಿಯೋಜನೆಗೊಂಡು ಕಾರ್ಯ ನಿರ್ವಹಿಸಿದ ಐ.ಎಫ್.ಎಸ್ ಅಧಿಕಾರಿಗಳಾದ ಶ್ರೀ ಪ್ರವೀಣ್ ಚಂದ್ರ ಪಾಂಡೆ ಐ.ಎಫ್.ಎಸ್, ಶ್ರೀ ಶಿವಣ್ಣ ಐ.ಎಫ್.ಎಸ್, ಶ್ರೀ ಆರ್. ಉದಯ್ ಕುಮಾರ್ ಐ.ಎಫ್.ಎಸ್, ಇವರು ಹಾಗೂ ಬೋಧಕ ವರ್ಗದ ಕುಲಸಚಿವರ ಅವಧಿಯಲ್ಲಿ ಕಟ್ಟಡ ಕಾಮಗಾರಿಗಳಾದ ವಿದ್ಯಾರ್ಥಿನಿಯರ ಹಾಸ್ಟೆಲ್, ಆಟದ ಮೈದಾನ, ಶೈಕ್ಷಣಿಕ ಕಟ್ಟಡ, ವಸತಿಗೃಹ, ರಸ್ತೆ, ಉದ್ಯಾನವನ ಇತ್ಯಾದಿ ಕಾಮಗಾರಿಗಳನ್ನು ಪ್ರಾರಂಭಿಸಿದ್ದು ನಂತರ ಬಂದಂತಹ ಅಧಿಕಾರಿಗಳು ಮುಂದುವರೆಸಿಕೊಂಡು ಹೋಗಿರುತ್ತಾರೆ. ಈ ವಿಷಯವು ಅರಣ್ಯ ಇಲಾಖೆಯ ಗಮನದಲ್ಲಿದ್ದು ಯಾರ ಅವಧಿಯಲ್ಲಿಯೂ ಆಕ್ಷೇಪಣೆ ವ್ಯಕ್ತವಾಗಿರುವುದಿಲ್ಲ ಹಾಗೂ ಯಾರ ವಿರುದ್ಧವು ಕೂಡ ದೂರನ್ನು ದಾಖಲಿಸಿರುವುದಿಲ್ಲ ಎಂಬುದನ್ನು ಸಭೆಯು ಗಮನಿಸಿತು.

ವಿಶ್ವವಿದ್ಯಾಲಯದ ಆವರಣದಲ್ಲಿ ಕಳ್ಳರು ಸಾಗುವಾನಿ ಮತ್ತು ಶ್ರೀಗಂಧದ ಮರಗಳನ್ನು ಕತ್ತರಿಸಲು ಪ್ರಯತ್ನಿಸಿ, ವಿಶ್ವವಿದ್ಯಾಲಯದ ಭದ್ರತಾ ಸಿಬ್ಬಂದಿಯವರಿಂದಾಗಿ ಅವರ ಪ್ರಯತ್ನ ವಿಫಲವಾಗಿರುವುದನ್ನು ತಿಳಿಸಿ ಅರಣ್ಯ ಇಲಾಖೆಗೆ ಪತ್ರಿಸಿರುವುದನ್ನು ಸಭೆಯು ಪರಿಶೀಲಿಸಿತು. ದೈನಂದಿನ ಕಾರ್ಯದಂತೆ ವಿಶ್ವವಿದ್ಯಾಲಯದ ಆವರಣದಲ್ಲಿರುವ ಗಿಡಗಂಟೆಗಳು ಹಾಗೂ ಪೊದೆಗಳನ್ನು ಸ್ವಚ್ಛಗೊಳಿಸುತಿದ್ದ ಹೊರಗುತ್ತಿಗೆಯ ಸಿಬ್ಬಂದಿ ವರ್ಗದವರು ಮಹಿಳಾ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿದ್ದ ಕೆಲವು ಮರಗಳನ್ನು ಯಾರೋ ದುಷ್ಕರ್ಮಿಗಳು ಕೊಯ್ದು ಅರ್ಧ ಬಿಟ್ಟು ಹೋಗಿದ್ದ ಮರಗಳನ್ನು ಎಸ್ಟೇಟ್ ಅಧಿಕಾರಿಯವರು ಆ ಸ್ಥಳದಿಂದ ತೆರವುಗೊಳಿಸಿ ಹಾಸ್ಟೆಲ್ ಸಮೀಪ ಶೇಖರಿಸಿಟ್ಟು, ಅರಣ್ಯ ಮತ್ತು ವನ್ಯಜೀವಿ ಇಲಾಖೆಯ ಸಿಬ್ಬಂದಿಗಳಿಗೆ ಮಾಹಿತಿ ನೀಡಿದ್ದು, ಕುಲಸಚಿವರು ಮತ್ತು ಕುಲಪತಿಗಳು ವಲಯ ಅರಣ್ಯ ಅಧಿಕಾರಿಗಳೊಂದಿಗೆ ಈ ವಿಷಯದ ಕುರಿತು ಮಾಹಿತಿ ಹಂಚಿಕೊಂಡಿರುವುದನ್ನು ತಮ್ಮ ವಿವರವಾದ ಪತ್ರದೊಂದಿಗೆ ಲಗತ್ತಿಸಿ ಸದರಿ ಪ್ರಕರಣವನ್ನು ಸಿಂಡಿಕೇಟ್ ಸಭೆಗೆ ಇನ್ನೊಮ್ಮೆ ಮರು ಮಂಡಿಸುವಂತೆ ಹಾಗೂ ನಿರ್ಣಯವನ್ನು

ವಿಸ್ತಾರವಾಗಿ ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಕೋರಿರುತ್ತಾರೆ ಈ ಹಿನ್ನಲೆಯಲ್ಲಿ ಸಭೆಗೆ ಮಂಡಿಸಿದೆ ಎಂದರು.

ಸದಸ್ಯರಾದ ಪ್ರೊ.ರಿಯಾಜ್ ಮಹಮೂದ್‌ರವರು ಮಾತನಾಡಿ ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ ನಾನು ಸುಮಾರು 22 ವರ್ಷಗಳಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಪ್ರಾರಂಭದಲ್ಲಿ ನಾನು ನೋಡಿದಂತೆ ವಿಶ್ವವಿದ್ಯಾಲಯದಲ್ಲಿ ಒಂದೇ ಕಟ್ಟಡವಿದ್ದು ಉಳಿದಂತೆ ಪೂರ್ಣವಾಗಿ ಹಸಿರಾದ ಕಾಡು ಇತ್ತು ನಂತರದ ದಿನಗಳಲ್ಲಿ ಐ.ಎಫ್.ಎಸ್ ಅಧಿಕಾರಿಯಾದ ಶ್ರೀ ಪ್ರವೀಣ್‌ಚಂದ್ರ ಪಾಂಡೆರವರು ಕುಲಸಚಿವರಾಗಿ ಆಯ್ಕೆಯಾಗಿ ಬಂದ ನಂತರ ವಿಶ್ವವಿದ್ಯಾಲಯದಲ್ಲಿ ಈಗಿರುವ ಎಲ್ಲಾ ಕಟ್ಟಡಗಳನ್ನು ಕಟ್ಟಲಾಗಿದೆ. ಆಗಲು ಮರಗಳನ್ನು ಕಟಾವು ಮಾಡಿ ಕ್ರಮಕೈಗೊಳ್ಳಲಾಗಿದೆ. ಆಗ ಅರಣ್ಯ ಇಲಾಖೆಯಲ್ಲಿ ಯಾವುದೇ ದೂರುಗಳು ದಾಖಲಾಗಿರುವುದಿಲ್ಲ. ಆದರೆ ಈಗ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿದ್ಯಾರ್ಥಿನಿಲಯಗಳನ್ನು ಕಟ್ಟಲು ಪ್ರಾರಂಭಿಸಿದಾಗ ಈ ಸಮಸ್ಯೆ ಬಂದಿದೆ. ಈ ಪ್ರಕರಣದ ಕುರಿತು ಈ ಹಿಂದೆಯೇ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ವಿಸ್ತಾರವಾಗಿ ಚರ್ಚಿಸಿ ಮೇಲ್ಕಂಡವರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಲು ಅನುಮತಿ ನೀಡದಿರಲು ನಿರ್ಣಯಿಸಲಾಗಿದೆ. ಅದರಂತೆ ಕ್ರಮ ಕೈಗೊಳ್ಳಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್. ರಾಮಲಿಂಗಪ್ಪ ರವರು ಮಾತನಾಡಿ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವಾದ ಮೇಲೆ ಯಾವ ಆಧಾರದ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಸಲು ಅನುಮತಿ ನೀಡದಿರಲು ನಿರ್ಣಯಿಸಲಾಗಿದೆ ಎಂಬುದನ್ನು ವಿಸ್ತಾರವಾಗಿ ಸರ್ಕಾರಕ್ಕೆ ಬರೆದ ಪತ್ರದಲ್ಲಿ ತಿಳಿಸಬೇಕಿತ್ತು ಆದರೆ ಒಂದೇ ವಾಕ್ಯದಲ್ಲಿ ನಿರ್ಣಯ ತಿಳಿಸಿದ್ದರಿಂದ ಸರ್ಕಾರವು ಪುನಃ ಪತ್ರ ಬರದು ಅನುಮತಿ ಕೇಳಿರುತ್ತಾರೆ ಆದ್ದರಿಂದ ವಿಸ್ತಾರವಾಗಿ ಪತ್ರ ಬರೆಯಬೇಕಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲು ಸ್ವಾಭಾವಿಕ ನ್ಯಾಯದ ಹಿನ್ನಲೆಯಲ್ಲಿ ಚರ್ಚಿಸಿ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಗಿತ್ತು ಯಾವುದೇ ಕುಲಸಚಿವರಾದರು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕ್ರಮಕೈಗೊಂಡಾಗ ಈ ರೀತಿ ಆರೋಪಗಳು ಬಂದರೆ ಕರ್ತವ್ಯ ನಿರ್ವಹಿಸುವುದು ಕಷ್ಟವಾಗುತ್ತದೆ ಆದ್ದರಿಂದ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕ್ರಮ ಕೈಗೊಂಡಿರುವ ಕುರಿತು ಸಮಜಾಯಿಷಿಗಳನ್ನು ನೀಡಿ ಸರ್ಕಾರಕ್ಕೆ ವಿವರವಾದ ಪತ್ರ ಬರಯಬಹುದು ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್ ರವರು ಮಾತನಾಡಿ ಈಗಾಗಲೇ ಸಿಂಡಿಕೇಟ್ ಸಭೆ ಅನುಮತಿಸಿಲ್ಲ ಎಂದು ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಪತ್ರಿಸಿದ್ದು ನಿರ್ಣಯಗಳು ತದ್ವಿರುದ್ಧ ಆಗಬಾರದು ಆದ್ದರಿಂದ ವಿವರವಾಗಿ ಪತ್ರ ಬರೆಯಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ರಮೇಶಬಾಬು, ಶ್ರೀ ಬಳ್ಳೇಕೆರೆ ಸಂತೋಷ್ ಹಾಗೂ ಇತರೆ ಎಲ್ಲಾ ಸದಸ್ಯರು ದೋಷಾರೋಪಣ ಪಟ್ಟಿ ಸಲ್ಲಿಸಲು ಅನುಮತಿ ನೀಡದಿರಲು ನಿರ್ಣಯಿಸಿರುವ ಕುರಿತು ಸೂಕ್ತ ಸಮಜಾಯಿಷಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಕೋರಿದರು.

**ನಿರ್ಣಯ :** ಸರ್ಕಾರದ ಹಾಗೂ ಅರಣ್ಯ ಇಲಾಖೆಯ ಪತ್ರಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ನೇಮಕಾತಿ ಪ್ರಾಧಿಕಾರವಾದ ಈ ಸಭೆಯು ಈ ಎಲ್ಲಾ ದಾಖಲಾತಿ ಮತ್ತು ಮಾಹಿತಿಗಳನ್ನು ಪರಿಶೀಲಿಸಿ ಸುಧೀರ್ಘವಾಗಿ ಚರ್ಚಿಸಿತು. ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದಲೂ ಬಂದಂತಹ ಸರ್ಕಾರದ ಐ.ಎಫ್.ಎಸ್/ಐ.ಎ.ಎಸ್. ಹಾಗೂ ಇತರೆ ಅಧಿಕಾರಿಗಳು ವಿಶ್ವವಿದ್ಯಾಲಯದ ಶೈಕ್ಷಣಿಕಾಭಿವೃದ್ಧಿಗಾಗಿ ಕಟ್ಟಡ ಕಾಮಗಾರಿಗಳನ್ನು ಮಾಡಿರುವುದನ್ನು ಸಭೆಯು ಗಮನಿಸಿತು.

ಡಾ. ಹೆಚ್. ಎಸ್. ಭೋಜ್ಯಾನಾಯ್ಕ್‌ರವರು ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ವಿಶ್ವವಿದ್ಯಾಲಯದ 230 ಎಕರೆ ಜಾಗದ ಗುತ್ತಿಗೆ ನವೀಕರಣಕ್ಕಾಗಿ ಪ್ರಯತ್ನ ಮಾಡಿರುವುದನ್ನು ಸಭೆಯು ಗಮನಿಸಿತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎರಡು ವಿದ್ಯಾರ್ಥಿನಿಯರ ಹಾಸ್ಟೆಲ್

ಮಧ್ಯದಲ್ಲಿ ಉಳಿದಿದ್ದ ಜಾಗದಲ್ಲಿ ವಿದ್ಯಾರ್ಥಿನಿಯರಿಗಾಗಿ ನಿಯಮಾನುಸಾರ ಸಕ್ಷಮ ಪ್ರಾಧಿಕಾರವಾದ ಸಿಂಡಿಕೇಟ್, ಹಣಕಾಸು ಸಮಿತಿ ಮತ್ತು ಕಟ್ಟಡ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಹಾಸ್ಟೆಲ್ ನಿರ್ಮಾಣ ಮಾಡಲು ಕ್ರಮ ಕೈಗೊಂಡಿರುವುದಾಗಿ ಹೇಳಿರುತ್ತಾರೆ.

ವಿಶ್ವವಿದ್ಯಾಲಯವು ಪ್ರಾರಂಭವಾದಾಗಿನಿಂದ ವಿಶ್ವವಿದ್ಯಾಲಯವು ಈ ಮಟ್ಟಕ್ಕೆ ಬೆಳೆದು ಬಂದ ಪ್ರಗತಿಯನ್ನು ಅವಲೋಕಿಸಲಾಯಿತು. ವಿಶ್ವವಿದ್ಯಾಲಯವು ಅರಣ್ಯ ಭೂಮಿ ಜಾಗದಲ್ಲಿ ಶುರುವಾಗಿದ್ದರಿಂದ ದಟ್ಟ ಕಾಡಿನ ನಡುವೆ ಒಂದು ಕಟ್ಟಡದ ಮೂಲಕ ಪ್ರಾರಂಭಿಸಲಾಗಿತ್ತು. ವಿಶ್ವವಿದ್ಯಾಲಯ ಬೆಳೆದಂತೆ ವಿವಿಧ ವಿಭಾಗಗಳಿಗೆ ಕಟ್ಟಡ, ಲ್ಯಾಬ್, ಲೈಬ್ರರಿ ಕಟ್ಟಡ, ಕ್ರೀಡಾ ವಿಭಾಗಗಳಿಗೆ ಪ್ರತ್ಯೇಕ ಕಟ್ಟಡಗಳನ್ನು ಕಟ್ಟಬೇಕಾಗಿತ್ತು, ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗಾಗಿ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಬೇಕಾಗಿತ್ತು. ಈ ಎಲ್ಲಾ ಕಾಮಗಾರಿಗಳಿಗೆ ಕಾಡನ್ನು ಕಡಿದು ಕಟ್ಟಡ ನಿರ್ಮಿಸಲೇಬೇಕಾಗಿತ್ತು. ಈ ಹಿಂದೆ ಕುಲಸಚಿವರಾಗಿ ಬಂದ ಐ.ಎಫ್.ಎಸ್. ಅಧಿಕಾರಿಗಳು ವಿಶ್ವವಿದ್ಯಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಸುಮಾರು ಕಟ್ಟಡಗಳನ್ನು ಕಟ್ಟುವಾಗ ಮರಗಳ ಕಡಿತಲೆ ಆಗಿದ್ದು ಆಗ ಅರಣ್ಯ ಇಲಾಖೆಯಲ್ಲಿ ಯಾವುದೇ ದೂರುಗಳು ದಾಖಲಾಗದೇ ಇರುವುದನ್ನು ಸಭೆಯು ಗಮನಿಸಲಾಯಿತು. ಈ ಪ್ರಕರಣದಲ್ಲಿ ಮರಗಳ್ಳರು ಕಡಿತಲೆ ಮಾಡಿದ್ದ ಮರಗಳನ್ನು ವಿಶ್ವವಿದ್ಯಾಲಯದ ಮಾಹಿತಿಯ ಮೇರೆಗೆ ಅರಣ್ಯ ಇಲಾಖೆಯವರು ತೆಗೆದುಕೊಂಡು ಹೋಗಿದ್ದು, ಮರಗಳ್ಳರನ್ನು ಹಿಡಿದು ಒಪ್ಪಿಸಿರುವುದಾಗಿ ಪೋಟೋವನ್ನು ಲಗತ್ತಿಸಿರುತ್ತಾರೆ. ಪ್ರಸುತ ಸಂದರ್ಭದಲ್ಲಿ ವಿಶ್ವವಿದ್ಯಾಲಯವು ಬೆಳೆಯುತ್ತಿರುವುದರಿಂದ, ಅಭಿವೃದ್ಧಿಯ ದೃಷ್ಟಿಯಿಂದ ಪ್ರಕರಣ ನಡೆದ ಸಂದರ್ಭದಲ್ಲಿ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಿದ ಪ್ರೊ. ಹೆಚ್.ಎಸ್. ಭೋಜ್ಯನಾಯ್ಕ್, ಮತ್ತು ಇತರರು ವಿಶ್ವವಿದ್ಯಾಲಯದ ಹಿತಾಸಕ್ತಿಯಿಂದ ಕೈಗೊಂಡಿರುವ ಕ್ರಮವನ್ನು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಸಮರ್ಥಿಸಿಕೊಂಡು, ತಪ್ಪು ಅಭಿಪ್ರಾಯದಿಂದ ಈ ಪ್ರಕರಣ ದಾಖಲಾಗಿರುವ ಸಾಧ್ಯತೆಯಿರುವುದರಿಂದ, ದೋಷಾರೋಪಣ ಪಟ್ಟಿ ಸಲ್ಲಿಸಲು ಅನುಮತಿ ನೀಡದಿರಲು ಸಭೆ ನಿರ್ಣಯಿಸಿತು. ಈ ಕುರಿತು ಹಾಗೂ ಈ ಪ್ರಕರಣವನ್ನು ರದ್ದು ಮಾಡಲು ಕೋರಿ ಸೂಕ್ತ ಸಮಜಾಯಿಷಿಯೊಂದಿಗೆ ಸರ್ಕಾರಕ್ಕೆ ವಿವರವಾದ ಪತ್ರ ಬರೆಯಲು ನಿರ್ಣಯಿಸಲಾಯಿತು.

**2022–ಸಿಂ–5.03:** ಕುವೆಂಪು ವಿಶ್ವವಿದ್ಯಾಲಯದ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿತರಿಗೆ ಸಕ್ಷಮ ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡುವ ಕುರಿತು.

**ಚರ್ಚೆ :** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ ದಿನಾಂಕ:28–02–2022ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳಲ್ಲಿ ಈ ವಿಷಯದ ಕುರಿತು ದಾಖಲಾಗಿದ್ದ ನಿರ್ಣಯದ ಕುರಿತು ಆಕ್ಷೇಪ ಬಂದ ಹಿನ್ನೆಲೆಯಲ್ಲಿ ದಿನಾಂಕ: 02–06–2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮರುಪರಿಶೀಲನೆಗಾಗಿ ಮಂಡಿಸಲಾಗಿತ್ತು. ಆದರೆ ಈ ಪ್ರಕರಣ ನಡೆದು ತುಂಬಾ ವರ್ಷಗಳಾಗಿದ್ದು ಸಮಗ್ರ ಮಾಹಿತಿಯೊಂದಿಗೆ ಚರ್ಚಿಸಬೇಕಾಗಿದ್ದರಿಂದ ಸಮಯಾವಕಾಶ ನೀಡುವಂತೆ ಕೋರಿದ್ದರಿಂದ ಈ ವಿಷಯದ ಕುರಿತು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ಮುಂದುವರೆದು, ದಿನಾಂಕ: 20–12–2021ರಂದು ಪೋಲೀಸ್ ಅಧೀಕ್ಷಕರು, ಪೋಲೀಸ್ ಅಧೀಕ್ಷಕರ ಕಛೇರಿ, ಶಿವಮೊಗ್ಗ, ಇವರು ಪತ್ರ ಬರೆದು ಕೂಡಲೇ ಅಭಿಯೋಜನಾ ಮಂಜೂರಾತಿ ಪತ್ರ ನೀಡುವಂತೆ ಕೋರಿರುತ್ತಾರೆ. ಅಲ್ಲದೇ ದಿನಾಂಕ:12–05–2022ರಂದು ಭದ್ರಾವತಿಯ ಸಹಾಯಕ ಪೋಲೀಸ್ ಅಧೀಕ್ಷಕರು ವಿಶ್ವವಿದ್ಯಾಲಯಕ್ಕೆ ಖುದ್ದಾಗಿ ಭೇಟಿ ನೀಡಿ ಈ ಬಗ್ಗೆ ಮಾಹಿತಿ ಕೇಳಿರುತ್ತಾರೆ. ಹಾಗೂ ದಿನಾಂಕ:19–05–2022ರಂದು ಪೋಲೀಸ್ ಅಧೀಕ್ಷಕರು, ಪೋಲೀಸ್ ಅಧೀಕ್ಷಕರ ಕಛೇರಿ, ಶಿವಮೊಗ್ಗ, ಇವರು ಪುನಃ ಪತ್ರ ಬರೆದು ಅಭಿಯೋಜನೆ ಮಂಜೂರಾತಿ ದೊರೆಯದೇ ಇರುವುದು

ವಿಚಾರಣೆಗೆ ತೊಂದರೆಯಾಗುತ್ತಿದೆ ಅಲ್ಲದೆ ಪ್ರಕರಣವು ದಿನಾಂಕ:07-06-2022ರಂದು ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವುದರಿಂದ ಕೂಡಲೇ ಅಭಿಯೋಜನಾ ಮಂಜೂರಾತಿ ಪತ್ರ ನೀಡುವಂತೆ ಕೋರಿರುವುದರಿಂದ ಸದರಿ ವಿಷಯದ ಕುರಿತು ನಿರ್ಣಯವು ಇಂದೇ ಆಗಬೇಕಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪರವರು ಮಾತನಾಡಿ ಈ ಪ್ರಕರಣದಲ್ಲಿ ಖಾಯಂ ನೌಕರರು ಹಾಗೂ ಏಜೆನ್ಸಿ ನೌಕರರು ಇದ್ದಾರೆ ಅದರಲ್ಲಿ ಹಲವು ನೌಕರರು ಈಗಾಗಲೇ ನಿವೃತ್ತರಾಗಿದ್ದಾರೆ. ಅಲ್ಲದೇ ವಿಶ್ವವಿದ್ಯಾಲಯವು ಈ ಪ್ರಕರಣದ ಕುರಿತು ವಿಚಾರಣೆ ನಡೆಸಿ ಪ್ರಕರಣದಲ್ಲಿ ಭಾಗಿಯಾಗಿರುವವರಿಗೆ ದಂಡನೆಯನ್ನು ವಿಧಿಸಲಾಗಿದೆ. ಉದಾಹರಣೆಗೆ ಕೆಲವರಿಗೆ ಅವರ ಹುದ್ದೆಯಲ್ಲಿಯೇ ಕಿರಿಯರನ್ನಾಗಿಸಿದೆ. ಆದ್ದರಿಂದ ಈ ವಿಷಯ ಮುಕ್ತಾಯವಾಗಿದ್ದು ಪುನ: ಪರಿಶೀಲಿಸುವ ಅಗತ್ಯವಿಲ್ಲ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ದಿನಾಂಕ:17-07-2021ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿತರಿಗೆ ಸಕ್ಷಮ ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡದಿರಲು ನಿರ್ಣಯವಾಗಿರುತ್ತದೆ. ಆದರೆ ಸದರಿ ನಿರ್ಣಯವನ್ನು ತಿಳಿಸಿ ಪೊಲೀಸ್ ಇಲಾಖೆಗೆ ಪತ್ರ ಬರೆದಿರುವುದಿಲ್ಲ. ಈ ಮಾಹಿತಿ ಪೊಲೀಸ್ ಇಲಾಖೆಗೆ ತಿಳಿಸಿದ್ದರೆ ಪೊಲೀಸ್ ಇಲಾಖೆಯಿಂದ ಪತ್ರ ಬರುತ್ತಿರಲಿಲ್ಲ. ಸಿಂಡಿಕೇಟ್ ಸಭೆಯಲ್ಲಿ ಒಂದು ಸಾರಿ ನಿರ್ಣಯವಾದ ಮೇಲೆ ಪುನ: ಪುನ: ಚರ್ಚಿಸುವ ಅಗತ್ಯವಿರುವುದಿಲ್ಲ. ಪೊಲೀಸ್ ಇಲಾಖೆಯಿಂದ ಸುಮೋಟೋ ಕೇಸ್ ದಾಖಲಿಸಲಾಗಿದೆ. ವಿಶ್ವವಿದ್ಯಾಲಯವು ಪ್ರಕರಣ ದಾಖಲಿಸಿಲ್ಲ. ಹಾಗಾಗಿ ಅನುಮತಿ ಕೊಡಲೇ ಬೇಕೆಂದಿಲ್ಲ ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಈ ವಿಷಯಕ್ಕೆ ನನ್ನ ಸಮ್ಮತಿ ಇಲ್ಲ ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ನ್ಯಾಯಾಲಯ ಈ ಪ್ರಕರಣವನ್ನು ಖುಲಾಸೆ ಮಾಡಿಲ್ಲ. ನಿಯಮಾನುಸಾರ ತನಿಖೆ ನಡೆಸಲು ಸರ್ಕಾರಕ್ಕೆ ಅವಕಾಶ ಕಲ್ಪಿಸಿದೆ, ಈ ಹಿನ್ನೆಲೆಯಲ್ಲಿ ಪ್ರಕರಣ ಇನ್ನೂ ಚಾಲ್ತಿಯಲ್ಲಿದೆ. ವಿಶ್ವವಿದ್ಯಾಲಯ ವಿಚಾರಣೆ ನಡೆಸಿ ಬಡ್ತಿಗಳನ್ನು ಹಿಂಪಡೆದಿರುವುದು ನೌಕರರು ಆರೋಪಿಗಳು ಎಂಬುದನ್ನು ಸಾಬೀತುಪಡಿಸುತ್ತದೆ ಎಂದು ಹೇಳಿದರು. ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರು ಮಾತನಾಡಿ ಈ ಪ್ರಕರಣ ಆಕಸ್ಮಿಕ ತಪ್ಪಲ್ಲ ಉದ್ದೇಶಪೂರ್ವಕವಾಗಿ ಮಾಡಿರುವಂತಹದ್ದು ಕಾನೂನಿನ ಚೌಕಟ್ಟಿನಲ್ಲಿ ಬರುತ್ತದೆ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಹಾಗೂ ಇತರ ಎಲ್ಲ ಸದಸ್ಯರು ಇದಕ್ಕೆ ಕಾನೂನು ಅಭಿಪ್ರಾಯ ಪಡೆಯಬಹುದು ಎಂದು ಹೇಳಿದರು.

ಕುಲಸಚಿವರು ಮಾತನಾಡಿ ಇದು ಬಹಳ ಗಂಭೀರ ಪ್ರಕರಣ ವಿಶ್ವವಿದ್ಯಾಲಯವು ವಿಧಿಸಿದ ಶಿಕ್ಷೆಯ ಪ್ರಮಾಣ ಬಹಳ ಕಡಿಮೆ, ಅಲ್ಲದೇ ಈಗಾಗಲೇ ಈ ವಿಷಯದ ಕುರಿತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರೊಂದಿಗೆ ಮೌಖಿಕವಾಗಿ ಚರ್ಚಿಸಲಾಗಿದೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ನ್ಯಾಯಾಲಯದ ಆದೇಶದ ಪ್ರಕಾರ ಸರ್ಕಾರಕ್ಕೆ ಈ ಪ್ರಕರಣದ ತನಿಖೆ ನಡೆಸಲು ಅಧಿಕಾರ ಇದೆ ಇದನ್ನು ವಿಶ್ವವಿದ್ಯಾಲಯ ತೀರ್ಮಾನಿಸಲು

ಬರುವುದಿಲ್ಲ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು, ಆದ್ದರಿಂದ ಅಭಿಯೋಜನಾ ಮಂಜೂರಾತಿ ನೀಡಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಹೆಚ್ ಬಿ. ರಮೇಶಬಾಬುರವರು ಮಾತನಾಡಿ ವಿಶ್ವವಿದ್ಯಾಲಯದಿಂದ ಕೇಸ್ ದಾಖಲಾಗಿಲ್ಲ ಆದ್ದರಿಂದ ಮತ್ತೊಮ್ಮೆ ಕಾನೂನು ಅಭಿಪ್ರಾಯ ಪಡೆಯಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಪುನ: ಮಾತನಾಡಿ ಮರಕಡಿತಲೆ ಪ್ರಕರಣವು ವಿಶ್ವವಿದ್ಯಾಲಯದ ಹಿತಾಸಕ್ತಿಯಿಂದ ಮಾಡಿರುವ ಕೃತ್ಯವಾಗಿರುವುದರಿಂದ ನೌಕರರ ಹಿತಾಸಕ್ತಿಯಿಂದ ಅಭಿಯೋಜನಾ ಮಂಜೂರಾತಿ ನೀಡಬಾರದು ಎಂದು ತೀರ್ಮಾನಿಸಲಾಗಿದೆ. ಆದರೆ ಈ ಪ್ರಕರಣವೇ ಬೇರೆ ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಕಾನೂನು ಅಭಿಪ್ರಾಯ ಪಡೆಯಬಹುದು ಎಂದು ಹೇಳಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಆರೋಪಿತರಿಗೆ ಸಕ್ಷಮ ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್ ವತಿಯಿಂದ ಅಭಿಯೋಜನಾ ಮಂಜೂರಾತಿ ಪತ್ರ ನೀಡುವ ಕುರಿತು ಕಾನೂನು ಅಭಿಪ್ರಾಯ ಪಡೆಯಲು ನಿರ್ಣಯಿಸಿ, ಕಾನೂನು ಅಭಿಪ್ರಾಯ ಬಂದ ನಂತರ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ತೀರ್ಮಾನಿಸಿತು.

## ಪರೀಕ್ಷಾ ವಿಭಾಗ

**2022–ಸಿಂ–5.04:** ಮೇ: ಯುನಿಕ್ಲೇರ್ ಸಂಸ್ಥೆಯಿಂದ ಪಡೆದ e-governance ಸೇವೆಗಳ ಕುರಿತು.

**ಚರ್ಚೆ :** ಕುಲಸಚಿವ(ಪರೀಕ್ಷಾಂಗ)ರವರು ವಿಷಯ ಮಂಡಿಸಿ ಮಾತನಾಡಿ ಮೇ: ಯುನಿಕ್ಲೇರ್ ಸಂಸ್ಥೆಯಿಂದ ಪಡೆದ e-governance ಸೇವೆಗಳನ್ನು ಪಡೆಯುವ ಕುರಿತು 27–08–2020ರಲ್ಲಿ ಒಪ್ಪಂದ ಮಾಡಿಕೊಂಡಿದ್ದು ಇದುವರೆಗೂ ಸೇವೆಯನ್ನು ಪಡೆಯಲಾಗುತ್ತಿದೆ. ಒಂದು ವರ್ಷದ ಸೇವಾ ಶುಲ್ಕ ನೀಡಲಾಗಿದೆ. ನಂತರದಲ್ಲಿ ಪಾವತಿಯಾಗಿರುವುದಿಲ್ಲ ಆದರೆ ದಿನಾಂಕ: 21–01–2021ರ ಸಿಂಡಿಕೇಟ್ ಸಭೆಗೆ ಈ ವಿಷಯವನ್ನು ಸ್ಥಿರಿಕರಣಕ್ಕಾಗಿ ಮಂಡಿಸಿದಾಗ ಸದರಿ ಸೇವೆಗಳಿಗೆ 2020–21ರ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಮಾತ್ರ ಅನುಮತಿ ನೀಡಲು ಆನಂತರ ಮುಂದುವರಿಕೆಯ ಕುರಿತು ಪರಿಶೀಲಿಸಲು ಸಮಿತಿಯನ್ನು ರಚಿಸಲು ನಿರ್ಣಯಿಸಲಾಗಿದೆ ಎಂದು ನಮೂದಾಗಿರುತ್ತದೆ. ಆದರೆ ಆಗಿನ ಕುಲಸಚಿವ(ಪರೀಕ್ಷಾಂಗ)ರವರು ಮಾನ್ಯ ಕುಲಪತಿಗಳಿಗೆ ಪತ್ರ ಬರೆದು ಸದರಿ ಸೇವೆಗಳಿಗೆ ಮಾಡಿಕೊಂಡ ಒಪ್ಪಂದವನ್ನು ಸರ್ವಾನುಮತದಿಂದ ಅನುಮೋದಿಸಲಾಗಿದೆ ಎಂದೂ, ನಿರ್ಣಯಗಳಲ್ಲಿ ತಪ್ಪಾಗಿ ದಾಖಲಾಗಿದೆಯೆಂದು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ನಂತರದ ಯಾವುದೇ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿರುವುದಿಲ್ಲ.

ಆದರೆ ಪ್ರಸ್ತುತ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಅನುಮತಿ ನೀಡಿದ ಒಂದು ವರ್ಷ ಅವಧಿಯು ಮುಗಿದು, ಇನ್ನು ಒಂದು ವರ್ಷ ಹೆಚ್ಚುವರಿಯಾಗಿ ಸದರಿಯವರ ಸೇವೆಯನ್ನು ಮುಂದುವರೆಸಿರುತ್ತಾರೆ, ಆ ಒಂದು ವರ್ಷಕ್ಕೆ ಮಾತ್ರ ಅವರಿಗೆ ಸೇವಾಶುಲ್ಕ ನೀಡಲಾಗಿದೆ ಆದರೂ ಮೇ: ಯುನಿಕ್ಲೇರ್ ಸಂಸ್ಥೆಯವರು ತಮ್ಮ ಸೇವೆಯನ್ನು ಇದುವರೆಗೂ ಮುಂದುವರೆಸಿರುತ್ತಾರೆ ಈಗ

ಸದರಿಯವರ ಸೇವೆಯನ್ನು ರದ್ದುಗೊಳಿಸಬೇಕೇ ಅಥವಾ ಒಪ್ಪಂದದ ಪ್ರಕಾರ 5 ವರ್ಷಗಳು ಮುಗಿಯುವವರೆಗೆ ಮುಂದುವರೆಸಬೇಕೇ ಎಂಬ ಬಗ್ಗೆ ನಿರ್ಣಯಕ್ಕಾಗಿ ಮಂಡಿಸಿದೆ ಎಂದು ಹೇಳಿದರು.

ಸದಸ್ಯರು ಸದರಿ ಸಂಸ್ಥೆಯವರು ಯಾವ ಯಾವ ಸೇವೆಗಳನ್ನು ನೀಡುತ್ತಿದೆ ಎಂದು ಮಾಹಿತಿ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರಾದ ಶ್ರೀ ಮೋಹನ್‌ರವರು ಮೆ: ಯುನಿಕ್ಲೇರ್ ಸಂಸ್ಥೆ ನೀಡುವ ಸೇವೆಗಳ ಮಾಹಿತಿಯನ್ನು ನೀಡಿದರು.

ಕುಲಸಚಿವರು ಮಾತನಾಡಿ ಪ್ರಸ್ತುತ ಯುಯುಸಿಎಂಎಸ್ ತಂತ್ರಾಂಶ ಜಾರಿಗೆ ಬಂದಿರುವುದರಿಂದ ಬೇರೆ ಯಾವುದೇ ಸಾಫ್ಟವೇರ್ ತೆಗೆದುಕೊಳ್ಳಬಾರದು ಎಂದು ಸರ್ಕಾರದಿಂದ ನಿರ್ದೇಶನ ಬಂದಿದೆ ಎಂದು ಹೇಳಿದರು.

ಸದಸ್ಯರಾದ ಪ್ರೊ. ರಿಯಾಜ್ ಮಹಮೂದ್‌ರವರು ಮಾತನಾಡಿ ಯುಯುಸಿಎಂಎಸ್ ಸಾಫ್ಟ್‌ವೇರ್‌ನಲ್ಲಿ ಯಾವ ಯಾವ ಸೇವೆಗಳು ಸೇರಿವೆ ಈ ಸಾಫ್ಟ್‌ವೇರ್‌ನಲ್ಲಿ ಇರುವ ಸೇವೆಗಳನ್ನೇ ಮೆ: ಯುನಿಕ್ಲೇರ್ ಸಂಸ್ಥೆ ನೀಡುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಯುಯುಸಿಎಂಎಸ್ ಸಾಫ್ಟವೇರ್ ಒದಗಿಸದ ಸೇವೆಗಳನ್ನು ಸದರಿ ಸಂಸ್ಥೆ ಒದಗಿಸುವುದಾದರೆ ಈ ಒಪ್ಪಂದವನ್ನು ಮುಂದುವರೆಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಜಿ. ಧರ್ಮಪ್ರಸಾದ್‌ರವರು ಮಾತನಾಡಿ ಯಾವ ಯಾವ ಸೇವೆಗಳನ್ನು ಈ ಸಂಸ್ಥೆ ನೀಡುತ್ತದೆ ಎಂಬ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುವಂತೆ ಕೋರಿದರು.

ಸಂಸ್ಥೆಯ ಪರವಾಗಿ ಹಾಜರಿದ್ದ ಶ್ರೀ ಮೋಹನ್‌ರವರು ಮಾತನಾಡಿ ವಿಶ್ವವಿದ್ಯಾಲಯ ಪೋರ್ಟಲ್ ಮತ್ತು ವಿದ್ಯಾರ್ಥಿಗಳ ಪೋರ್ಟಲ್ ಎಂದು ಮಾಡಿ ಅದರ ಮೂಲಕ ಸೇವೆಗಳನ್ನು ನೀಡಲಾಗುತ್ತಿದೆ ಎಂದು ವಿವರಿಸಿದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಮಾನ್ಯ ಅಧ್ಯಕ್ಷರು ಹಾಗೂ ಕುಲಸಚಿವರು(ಪರೀಕ್ಷಾಂಗ)ರವರ ಅಭಿಪ್ರಾಯದಂತೆ ಕ್ರಮಕೈಗೊಳ್ಳಬಹುದು ಎಂದು ಹೇಳಿದರು.

ಇದಕ್ಕೆ ಆಕ್ಷೇಪಿಸಿದ ಶ್ರೀ ಜಿ. ಧರ್ಮಪ್ರಸಾದ್‌ರವರು ಈ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಬೇಕು, ವರ್ಷಕ್ಕೆ ಆರ್ಥಿಕ ಹೊರೆ ಎಷ್ಟಾಗುತ್ತದೆ ಎಂಬ ಬಗ್ಗೆ ಪರಿಶೀಲಿಸಬೇಕು, ತಾವುಗಳು ತುರ್ತಾಗಿ ಸಭೆ ಕರೆದಿರುವುದರಿಂದ ಆನ್ ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಲಾಗಿದೆ, ಆದರೆ ತಾಂತ್ರಿಕ ಅಡಚಣೆ ಇರುವುದರಿಂದ ಸರಿಯಾಗಿ ವಿಷಯದ ಬಗ್ಗೆ ಚರ್ಚೆ ನಡೆಸಲಾಗುತ್ತಿಲ್ಲ ಈಗ ಈ ವಿಷಯದ ಕುರಿತು ನಿರ್ಣಯ ತೆಗೆದುಕೊಳ್ಳುವುದು ಸರಿಯಾದ ಕ್ರಮವಲ್ಲ ಎಂದರು.

ಸದಸ್ಯರಾದ ಡಾ. ಧನಂಜಯ್ ಬಿ.ಜಿ. ರವರು ಮಾತನಾಡಿ ಈ ಸಾಫ್ಟ್ ವೇರ್ ನಿಂದ ಒಳ್ಳೆಯ ಸೇವೆ ಸಿಗುತ್ತಿದೆ ವಿದ್ಯಾರ್ಥಿಗಳ ಎಲ್ಲ ಸಮಸ್ಯೆಗಳಿಗೂ ತಕ್ಷಣ ಪರಿಹಾರ ಸಿಗುತ್ತದೆ ಇದರಿಂದ ತುಂಬಾ ಅನುಕೂಲವಾಗುತ್ತಿದೆ ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ವಿಶ್ವವಿದ್ಯಾಲಯಕ್ಕೆ ಅನುಕೂಲವಾದರೆ ಮುಂದುವರೆಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್‌ರವರು ಮಾತನಾಡಿ ನಾವು ಯಾವುದಕ್ಕೂ ವಿರೋಧಿಸುವುದಿಲ್ಲ ಆದರೆ ಸರ್ಕಾರದ ನಿರ್ದೇಶನದ ಪ್ರಕಾರ ಯುಯುಸಿಎಂಎಸ್ ಹೊರತುಪಡಿಸಿ ಬೇರೆ ಯಾವುದೇ ಸಾಫ್ಟ್ ವೇರ್ ತೆಗೆದುಕೊಳ್ಳುವಂತಿಲ್ಲ ಆದ್ದರಿಂದ ವಿವರವಾಗಿ ಪರಿಶೀಲಿಸಬೇಕಾಗಿದೆ ಎಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡಿ ಸದಸ್ಯರೂ ಆಗಿರುವ ಪ್ರಾಂಶುಪಾಲರುಗಳ ಅಭಿಪ್ರಾಯ ತೆಗೆದುಕೊಂಡರೆ ಈ ಸಾಫ್ಟ್‌ವೇರ್‌ನಿಂದ ಒಳ್ಳೆಯ ಸೇವೆ ಸಿಗುತ್ತಿದೆ ಎನ್ನುತ್ತಿದ್ದಾರೆ. ಈಗಾಗಲೇ ಸಂಸ್ಥೆಯೊಂದಿಗೆ 5 ವರ್ಷಗಳ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ ಅದನ್ನು ರದ್ದುಪಡಿಸಿದರೆ ಕಾನೂನಾತ್ಮಕವಾಗಿ ತೊಡಕಾಗಬಹುದು ಎಂದರು.

ಕುಲಸಚಿವರು(ಪರೀಕ್ಷಾಂಗ)ರವರು ಮಾತನಾಡಿ ಇದು ಒಂದು ಆಪ್ ಅಷ್ಟೆ ಇದರಿಂದ ವಿದ್ಯಾರ್ಥಿಗಳ ಪ್ರವೇಶದಿಂದ ಹಿಡಿದು ಪದವಿ ಮುಗಿಯುವವಗಿನ ಮಾಹಿತಿ ವಿದ್ಯಾರ್ಥಿಗಳಿಗೆ ತಲುಪುತ್ತದೆ ಎಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್‌ಬಾಬುರವರು ಮಾತನಾಡಿ ಈಗಾಗಲೇ ಸಂಸ್ಥೆಯೊಂದಿಗೆ 5 ವರ್ಷಗಳ ಒಪ್ಪಂದವನ್ನು ಮಾಡಿಕೊಂಡಿರುವುದರಿಂದ ಮುಂದುವರೆಸಬಹುದು ಎಂದರು. ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಇದನ್ನು ಅನುಮೋದಿಸಿದರು.

ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥರವರು ಮಾತನಾಡಿ ಕೂಲಂಕುಷವಾಗಿ ಚರ್ಚಿಸಲು ಮುಂದಿನ ಸಭೆಗೆ ಮಂಡಿಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಬಳ್ಳೇಕೆರೆ ಸಂತೋಷ್‌ರವರು ಮಾತನಾಡಿ ಒಂದು ವರ್ಷದ ಸೇವಾ ಶುಲ್ಕ ಮಾತ್ರ ನೀಡಲಾಗಿದೆ ಆದರೂ ಇದುವರೆಗೂ ಸೇವೆ ನೀಡುತ್ತಿದ್ದಾರೆ. ನ್ಯಾಯಾಲಯಕ್ಕೆ ಹೋದರೆ ತೊಂದರೆಯಾಗುತ್ತದೆ ಎಂದರು.

ಸದಸ್ಯರಾದ ಶ್ರೀ ಬಿ. ನಿರಂಜನಮೂರ್ತಿಯವರು ಮಾತನಾಡಿ ಹಿಂದೆಯೂ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿಯೇ ನಿರ್ಣಯ ತೆಗೆದುಕೊಂಡು ಒಪ್ಪಂದ ಮಾಡಿಕೊಳ್ಳಲಾಗಿದೆ. ಸಂಸ್ಥೆಯು ಸರಿಯಾಗಿ ಸೇವೆ ನೀಡದಿದ್ದರೆ ಅಥವಾ ತೊಂದರೆಯಾಗಿದ್ದರೆ ರದ್ದುಪಡಿಸಬಹುದಿತ್ತು ಇಲ್ಲವಾದಲ್ಲಿ ಒಪ್ಪಂದವನ್ನು ಮುಂದುವರೆಸಬಹುದು ಎಂದು ಹೇಳಿದರು.

ಸದಸ್ಯರಾದ ಶ್ರೀ ಬಿ.ಸಿ. ಬಸವರಾಜ ಇವರು ಮಾತನಾಡಿ ಯುಯುಸಿಎಂಎಸ್ ಸಾಫ್ಟವೇರ್ ಪ್ರಥಮ ವರ್ಷಕ್ಕೆ ಅನ್ವಯವಾಗುತ್ತದೆ ದ್ವಿತೀಯ ಮತ್ತು ತೃತೀಯ ವರ್ಷಕ್ಕೆ ಮೇ: ಯುನಿಕ್ಲೇರ್ ಸಂಸ್ಥೆಯ ಸೇವೆ ಬೇಕಾಗುತ್ತದೆ ಎಂದು ಹೇಳಿದರು.

ಇದಕ್ಕೆ ಶ್ರೀ ಜಿ. ಧರ್ಮಪ್ರಸಾದ್ ಇವರನ್ನು ಹೊರತುಪಡಿಸಿ ಉಳಿದೆಲ್ಲಾ ಸದಸ್ಯರು ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಅನುಮತಿ ನೀಡಿದ ಒಂದು ವರ್ಷ ಮುಗಿದು ಈಗಾಗಲೇ ಒಂದು ವರ್ಷವಾಗಿದ್ದು, ಆ ಒಂದು ವರ್ಷಕ್ಕೆ ಮಾತ್ರ ಅವರಿಗೆ ಸೇವಾಶುಲ್ಕ ನೀಡಲಾಗಿದ್ದರೂ ಸಹ ಮೇ: ಯುನಿಕ್ಲೇರ್ ಸಂಸ್ಥೆಯವರು ತಮ್ಮ ಸೇವೆಯನ್ನು ಇದುವರೆಗೂ ಮುಂದುವರೆಸಿರುವುದರಿಂದ ಬಾಕಿ ಹಣ ಪಾವತಿಸಲು ಮತ್ತು ಯುಯುಸಿಎಂಎಸ್ ಸಾಫ್ಟ್‌ವೇರ್ ಜಾರಿಗೆ ಬರುವ ಮುನ್ನ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ದ್ವಿತೀಯ ಮತ್ತು ತೃತೀಯ ವರ್ಷ ಮುಗಿಯುವವರೆಗೂ ಸದರಿ ಸಂಸ್ಥೆಯ ಸೇವೆಯನ್ನು ಪಡೆಯಲು ಸಭೆಯು ಅನುಮೋದನೆ ನೀಡಿತು. ಆದರೆ ಸದಸ್ಯರಾದ ಶ್ರೀ ಧರ್ಮಪ್ರಸಾದ್ ರವರು ಈ ನಿರ್ಣಯಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿ ಡೀಸೆಂಟ್ ನೋಟ್ ನೀಡುವುದಾಗಿ ಮೌಖಿಕವಾಗಿ ತಿಳಿಸಿದರು.

**2022-ಸಿಂ-5.05:** ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು: ಯಾವುದೂ ಇರುವುದಿಲ್ಲ

**2022-ಸಿಂ-5.06:** ಸರ್ಕಾರದಿಂದ ಬಂದ ಪತ್ರಗಳು/ರಹಸ್ಯ ವರದಿಗಳ ಮಂಡನೆ: ಯಾವುದೂ ಇರುವುದಿಲ್ಲ.

**2022–ಸಿಂ–5.07 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು : ಯಾವುದೂ ಇರುವುದಿಲ್ಲ.**

ಕುಲಸಚಿವರು ಮಾತನಾಡಿ ದೂರಶಿಕ್ಷಣದ 2019–20ನೇ ಸಾಲಿನ ವಿದ್ಯಾರ್ಥಿಗಳ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪರೀಕ್ಷೆಯಿಲ್ಲದೇ ಪ್ರಮೋಟ್ ಮಾಡಬೇಕು ಎಂದು ನ್ಯಾಯಾಲಯದ ತೀರ್ಪು ಬಂದಿದೆ ಆದರೆ ಆದೇಶದ ಪ್ರತಿ ಇನ್ನೂ ಸಿಕ್ಕಿಲ್ಲ. ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಷ್ಟು ಶುಲ್ಕ ಸ್ವೀಕೃತವಾಗಿದೆ, ಎಷ್ಟು ಅಧ್ಯಯನ ಕೇಂದ್ರಗಳು ಪೂರ್ಣ ಶುಲ್ಕ ಪಾವತಿಸಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಪರಿಶೀಲಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ, ವಿಶ್ವವಿದ್ಯಾಲಯದ ಹಂತದಲ್ಲಿ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿದೆ. ಪರಿಶೀಲನೆ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿಯಿಲ್ಲ. ಫಲಿತಾಂಶ ಪ್ರಕಟಣೆಗೆ ಮುನ್ನ ಕುಲಸಚಿವರಿಂದ ಅನುಮತಿ ಪಡೆಯಬೇಕು ಎಂದು ದೂರಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ನಿರ್ದೇಶನ ನೀಡಬೇಕು ಎಂದು ಕೋರಿದರು. ಅಲ್ಲದೆ ಏನೇ ಮಾಡುವುದಿದ್ದರೂ ನ್ಯಾಯಾಲಯದ ತೀರ್ಪಿನ ಆದೇಶದ ಪ್ರತಿ ಸ್ವೀಕೃತವಾದ ಮೇಲೆ ಸಿಂಡಿಕೇಟ್ ಸಭೆಯಲ್ಲಿಟ್ಟು ಪರಿಶೀಲಿಸಿ ನಂತರ ಅದರಂತೆ ಕ್ರಮಕೈಗೊಳ್ಳಬೇಕು ಎಂದರು.

ಎಲ್ಲಾ ಸದಸ್ಯರು ಇದಕ್ಕೆ ಒಪ್ಪಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದೂರಶಿಕ್ಷಣದ 2019–20ನೇ ಸಾಲಿನ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪಿನ ಆದೇಶದ ಪ್ರತಿ ಸ್ವೀಕೃತವಾದ ಮೇಲೆ ಸಿಂಡಿಕೇಟ್ ಸಭೆಯಲ್ಲಿಟ್ಟು ಪರಿಶೀಲಿಸಿ ನಂತರ ಅದರಂತೆ ಕ್ರಮಕೈಗೊಳ್ಳಲು ಸಭೆಯು ನಿರ್ಣಯಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು